**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ ತಿ.ನರಸೀಪುರ.**

**ಸಿ ಸಿ ನಂ.133/2020**

| | | |
|---|---|---|
| ಸಾಕ್ಷಿದಾರರ ಹೆಸರುಃ | ಪುನೀತ ಬಿ.ಎನ್ | ಸಿ ಡಬ್ಲ್ಯೂಃ 1 |
| ತಂದೆಯ ಹೆಸರುಃ | ನಿಂಗೇಗೌಡ ಬಿ.ಎಲ್ | ಪಿ ಡಬ್ಲ್ಯೂಃ 1 |
| ವಯಸ್ಸುಃ | 37 ವರ್ಷ | |
| ಉದ್ಯೋಗಃ | ಆರಕ್ಷಕ ನಿರೀಕ್ಷಕರು | ಪ್ರ.ವ .ಬೋ.ದಿಃ |
| ವಾಸಸ್ಥಳಃ | ಸಿ.ಐ.ಡಿ, ಬೆಂಗಳೂರು | **27.06.2023** |

**ಮುಖ್ಯ ವಿಚಾರಣೆಃ** ಮಾನ್ಯ **ಎಪಿಪಿ** ರವರಿಂದಃ

ನಾನು ದಿನಾಂಕ 17.11.2019 ರಿಂದ 04.06.2021 ರವರೆಗೆ ಬನ್ನೂರು ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಈ ಪ್ರಕರಣದಲ್ಲಿ ದಿನಾಂಕ 10.02.2020 ರಂದು ಮಧ್ಯಾಹ್ನ 1 ಗಂಟೆ ಸಮಯದಲ್ಲಿ ನಾನು ಮತ್ತು ಠಾಣಾ ಸಿಬ್ಬಂಧಿಯಾದ ಚಾಸಾ-2 ರವರೊಂದಿಗೆ ಇಲಾಖಾ ಜೀಪಿನಲ್ಲಿ ಕೊಡಗಳ್ಳಿ ಗ್ರಾಮದಲ್ಲಿ ಗಸ್ತಿನಲ್ಲಿದ್ದಾಗ ಬನ್ನೂರು ಸಂತೇಮಾಳದಿಂದ ಬಿಳಿ ಪ್ಲಾಸ್ಟಿಕ ಚೀಲದಲ್ಲಿ ಹನುಮನಾಳು ಗ್ರಾಮದ ಕಡೆಗೆ ಒಬ್ಬ ವ್ಯಕ್ತಿಯು ಪ್ಯಾಸೆಂಜರ ಆಟೋದಲ್ಲಿ ಅಕ್ರಮವಾಗಿ ಮದ್ಯ ಇಟ್ಟುಕೊಂಡು ಸಾಗಣಿಕೆ ಮಾಡುತ್ತಿದ್ದಾನೆ ಎಂದು ಬಾತ್ಮೀ ಬಂದಿದ್ದು, ಸ್ಥಳದಲ್ಲಿಯೇ ಇದ್ದ ಚಾಸಾ-4 ಮತ್ತು 5 ರವರಿಗೆ ಪಂಚರಾಗಿ ಸಹಕರಿಸಲು ಕೋರಿದ್ದು, ಸದರಿಯವರು ಒಪ್ಪಿದ್ದ ಮೇರೆಗೆ ಅವರೊಂದಿಗೆ 1.45 ಗಂಟೆಗೆ ಹನುಮನಾಳು ಗ್ರಾಮದ ಬಸ್ ನಿಲ್ದಾಣದ ತಿರುವಿನಲ್ಲಿ ನಮ್ಮ ಇಲಾಖಾ ಜೀಪನ್ನು ನಿಲ್ಲಿಸಿ ಮರೆಯಿಂದ ನೋಡಲಾಗಿ ಬನ್ನೂರು ಕಡೆಯಿಂದ ಒಂದು ಪ್ಯಾಸೆಂಜರ ಆಟೋ ಬಂದಿದ್ದು, ಸದರಿ ಪ್ಯಾಸೆಂಜರ ಆಟೋದಿಂದ ಪ್ರಯಾಣಿಕರು ಇಳಿದು ಹೋಗುತ್ತಿದ್ದು, ಅವರಲ್ಲಿ ಒಬ್ಬ ವ್ಯಕ್ತಿಯ ಬಿಳಿ ಬಣ್ಣದ ಪ್ಲಾಸ್ಟಿಕ ಚೀಲವನ್ನು ಹಿಡಿದುಕೊಂಡು ಹೋಗುತ್ತಿದ್ದು, ತಕ್ಷಣ ನಾವು ಪಂಚರ ಸಮಕ್ಷಮ ದಾಳಿ

ಮಾಡಿದ್ದು, ಸದರಿ ವ್ಯಕ್ತಿಯನ್ನು ವಶಕ್ಕೆ ಪಡೆದು, ಸದರಿ ಪ್ಲಾಸ್ಟಿಕ ಚೀಲದಲ್ಲಿ ಇದ್ದ ವಸ್ತುವಿನ ಬಗ್ಗೆ ವಿಚಾರಣೆ ಮಾಡಲಾಗಿ ಸದರಿ ವ್ಯಕ್ತಿಯು ಪ್ಲಾಸ್ಟಿಕ ಚೀಲದಲ್ಲಿ 180 ಎಂ.ಎಲ್ ಹೈವಾರ್ಡ ಚಿಯರ್ಸ ಕಂಪನಿಯ 17 ಪೌಚಗಳು ಇದ್ದು, ಸದರಿ ಮದ್ಯದ ಪೌಚಗಳ ಹೊಂದುವ ಹಾಗೂ ಸಾಗಾಣಿಕೆ ಮಾಡುವ ಬಗ್ಗೆ ಸದರಿ ವ್ಯಕ್ತಿಯನ್ನು ವಿಚಾರಿಸಲಾಗಿ ಸದರಿ ವ್ಯಕ್ತಿ ತನ್ನ ಬಳಿ ಯಾವುದೇ ರಹದಾರಿ ಹಾಗೂ ಪರವಾನಿಗೆ ಇರುವುದಿಲ್ಲ ಎಂದು ತಿಳಿಸಿರುತ್ತಾನೆ. ಸದರಿ ವ್ಯಕ್ತಿಯು ತನ್ನ ಹೆಸರು ಸಿದ್ದೆಗೌಡ ಎಂದು ತಿಳಿಸಿದ್ದು, ತಾನು ಹನುಮನಾಳು ಗ್ರಾಮದ ನಿವಾಸಿ ಎಂದು ತಿಳಿಸಿರುತ್ತಾನೆ. ಸದರಿ ಮದ್ಯದ ಪೌಚಗಳನ್ನು ಪಂಚರ ಸಮಕ್ಷಮ ಮಧ್ಯಾಹ್ನ 2.15 ರಿಂದ 3.15 ವರೆಗೆ ಚಾಸಾ-4 ಮತ್ತು 5 ರವರ ಸಮಕ್ಷಮ ಪಂಚನಾಮೆ ಮಾಡಿ ಬಿಳಿ ಬಟ್ಟೆಯಲ್ಲಿ ಎ ಎಂಬ ಅಕ್ಷರದಿಂದ ಸೀಲು ಹಾಕಿ ಸದರಿ ಮದ್ಯದ ಪೌಚಗಳು ಇದ್ದ ಪ್ಲಾಸ್ಟಿಕ ಚೀಲವನ್ನು ಸಹ ಜಪ್ತುಪಡಿಸಿಕೊಂಡಿರುತ್ತೇವೆ. ನಂತರ ಸದರಿ ವ್ಯಕ್ತಿಯನ್ನು ಹಾಗೂ ಜಪ್ತುಪಡಿಸಿಕೊಂಡ ವಸ್ತುಗಳೊಂದಿಗೆ ಠಾಣೆಗೆ ಹಾಜರಾಗಿ ಠಾಣಾಧಿಕಾರಿಗೆ ಸ್ವವರದಿಯನ್ನು ನೀಡಿರುತ್ತೇನೆ.

ಸಾಕ್ಷಿಯು ತಾವು ಠಾಣಾಧಿಕಾರಿಗೆ ನೀಡಿರುವ ಸ್ವವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು **ನಿಪಿ-1** ಎಂದು, ಸಾಕ್ಷಿ ಸಹಿಯನ್ನು **ನಿಪಿ-1 ಎ** ಎಂದು, ಕೃತ್ಯ ಸ್ಥಳ ಹಾಗೂ ಜಪ್ತುಪಂಚನಾಮೆಯನ್ನು **ನಿಪಿ-2** ಎಂದು, ಸಾಕ್ಷಿ ಸಹಿಯನ್ನು **ನಿಪಿ-2 ಎ** ಎಂದು, ಸಾಕ್ಷಿಯು ಜಪ್ತುಪಡಿಸಿಕೊಂಡ ಎಲ್ಲಾ ಮದ್ಯದ ಪೌಚಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ **ಎಂ.ಓ-1** ಎಂದು, ಪ್ಲಾಸ್ಟಿಕ ಚೀಲವನ್ನು **ಎಂ.ಓ-2** ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸುತ್ತಾರೆ.

**ಪಾಟೀ ಸವಾಲುಃ** ಆರೋಪಿ ಪರ ಶ್ರೀ **ಕೆ.ಕೆ.ಎನ್** ವಕೀಲರಿಂದಃ

ಠಾಣೆಯಿಂದ ಕೊಡಗಳ್ಳಿ ಗ್ರಾಮಕ್ಕೆ ಎಷ್ಟು ಗಂಟೆಗೆ ಹೋಗಿರುತ್ತೇನೆ ಎಂದು ನನಗೆ ನಿಖರವಾಗಿ ಗೊತ್ತಿರುವುದಿಲ್ಲ. ಕೊಡಗಳ್ಳಿ ಗ್ರಾಮದಲ್ಲಿ ಎಷ್ಟು ಸಮಯದವರೆಗೆ ಗಸ್ತಿನಲ್ಲಿ ಇದ್ದೆನು ಎಂದು ಹೇಳಲು ಆಗುವುದಿಲ್ಲ. ನಾನು ಗಸ್ತಿಗೆ ನಮ್ಮ ಇಲಾಖಾ ಜೀಪಿನಲ್ಲಿ ಹೋಗಿರುತ್ತೇನೆ. ಸದರಿ ಜೀಪಿನ ಸಂ.ಕೆಎ-55-ಜಿ-114 ಎಂದು ಇರುತ್ತದೆ. ಬಾತ್ಮೀಯು ಮಧ್ಯಾಹ್ನ ಸುಮಾರು 1 ಗಂಟೆ ಸಮಯಕ್ಕೆ ಬಂದಿರುತ್ತದೆ. ಕೊಡಗಳ್ಳಿ ಗ್ರಾಮದಿಂದ

ಹನುಮನಾಳು ಗ್ರಾಮ ಸುಮಾರು 5 ರಿಂದ 6 ಕಿ.ಮೀ ದೂರ ಇರುತ್ತದೆ. ಸದರಿ ಸ್ಥಳಕ್ಕೆ ಕೊಡಗಳ್ಳಿ ಗ್ರಾಮದಿಂದ ಹೋಗಲು ಎಷು ಸಮಯ ಬೇಕಾಗುತ್ತದೆ ಎಂದು ನಿಖರವಾಗಿ ಹೇಳಲು ಆಗುವುದಿಲ್ಲ. ಹನುಮನಾಳು ಗ್ರಾಮಕ್ಕೆ ನಾನು, ಚಾಸಾ-2 ನಮ್ಮ ಇಲಾಖಾ ಜೀಪಿನ ಚಾಲಕ ಹಾಗೂ ಪಂಚರು ಹೋಗಿರುತ್ತೇವೆ. ಪಂಚರ ಹೆಸರು ನನಗೆ ಈಗ ನೆನಪಿರುವುದಿಲ್ಲ. ಪಂಚರನ್ನು ಕೊಡಗಳ್ಳಿ ಗ್ರಾಮದಿಂದ ಕರೆದುಕೊಂಡು ಹೋಗಿರುತ್ತೇವೆ. ಆರೋಪಿಯು ಬಂದ ಇಳಿದ ಪ್ಯಾಸೆಂಜರ ಆಟೋದ ಸಂಖ್ಯೆಯನ್ನು ನಾನು ನೋಡಿರುವುದಿಲ್ಲ. ಸದರಿ ಆಟೋದಿಂದ ಸುಮಾರು 5 ರಿಂದ 6 ಜನ ಇಳಿದಿರುತ್ತಾರೆ. ಆರೋಪಿಯ ತಂದೆಯ ಹೆಸರನ್ನು ವಿಚಾರಿಸಿದ್ದು, ಅವರ ತಂದೆಯ ಹೆಸರು ಈಗ ನನಗೆ ನೆನಪಿರುವುದಿಲ್ಲ. ಆರೋಪಿಯನ್ನು ವಶಕ್ಕೆ ಪಡೆದ್ದಾಗ ಮಧ್ಯಾಹ್ನ ಸುಮಾರು 2.15 ಗಂಟೆ ಸಮಯ ಆಗಿತ್ತು. ಆರೋಪಿಯನ್ನು ವಶಕ್ಕೆ ಪಡೆದ್ದಾಗ ಬೇರೆ ವ್ಯಕ್ತಿಗಳು ಇರಲಿಲ್ಲ. ಜಪ್ತುಪಡಿಸಿಕೊಂಡಿದ್ದ ಮದ್ಯದೊಂದಿಗೆ ಇದ್ದ ಪ್ಲಾಸ್ಟಿಕ ಚೀಲವನ್ನು ನ್ಯಾಯಾಲಯಕ್ಕೆ ಹಾಜರಪಡಿಸಿರುತ್ತೇನೆ. ಎಂ.ಓ-2 ಚೀಲ ಜಪ್ತುಪಡಿಸಿಕೊಂಡಿರುವ ಬಾಬ್ತು ಅದರ ಮೇಲೆ ಯಾವುದೇ ವಿಶೇಷ ಗುರುತು ಇರುವುದಿಲ್ಲ.

ನಾನು ಆರೋಪಿಯಿಂದ ಯಾವುದೇ ಮದ್ಯದ ಚೀಲವನ್ನು ಜಪ್ತುಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಯಿಂದ 180 ಎಂ.ಎಲ್ ನ 17 ಪೌಚಗಳನ್ನು ಜಪ್ತುಪಡಿಸಿಕೊಂಡಿರುತ್ತೇನೆ. ನಾನು ಆರೋಪಿಯಿಂದ ಜಪ್ತುಪಡಿಸಿಕೊಂಡ ಮದ್ಯದ ಪೌಚಗಳ ಒಟ್ಟು ಮೌಲ್ಯವನ್ನು ನಮೂದು ಮಾಡಿರುತ್ತೇನೆ. ಪ್ರತಿ ಮದ್ಯದ ಪೌಚಿನ ಬೆಲೆ ರೂ.60.64/- ಇರುತ್ತದೆ. ಸದರಿ ಮದ್ಯದ ಪೌಚಗಳ ಒಟ್ಟು ಬೆಲೆ ರೂ.1030.88/- ಇರುತ್ತದೆ. ಹನುಮನಾಳು ಗ್ರಾಮದ ನಿವಾಸಿಗಳನ್ನು ಪಂಚರಾಗಿ ನೇಮಿಸಲು ಯಾವುದೇ ತೊಂದರೆ ಇರಲಿಲ್ಲ. ಸದರಿ ಪ್ಯಾಸೆಂಜರ ಆಟೋದ ಚಾಲಕನನ್ನು ವಿಚಾರಣೆ ಮಾಡಿರುವುದಿಲ್ಲ.

ಪಂಚರ ಸಮಕ್ಷಮ ನಾನು ಯಾವುದೇ ದಾಳಿಯನ್ನು ಮಾಡಿರುವುದಿಲ್ಲ, ಯಾವುದೇ ಪಂಚನಾಮೆ ಮಾಡಿರುವುದಿಲ್ಲ, ಯಾವುದೇ ಮದ್ಯದ ಪೌಚಗಳನ್ನು ಜಪ್ತುಪಡಿಸಿಕೊಂಡಿರುವುದಿಲ್ಲ, ಆರೋಪಿಯು ಯಾವುದೇ ಮದ್ಯದ ಪೌಚಗಳನ್ನು ಸಾಗಾಣಿಕೆ ಮಾಡಿರುವುದಿಲ್ಲ ಹಾಗೂ ನಾನು ಠಾಣಾ ಅಂಕಿ-ಸಂಖ್ಯೆಯ ಸಲುವಾಗಿ ಆರೋಪಿಯ ವಿರುದ್ಧ

ಸುಳ್ಳು ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ.

ನಾನು ಠಾಣೆಗೆ ಬಂದು ಸ್ವವರದಿಯನ್ನು ತಯಾರಿಸಿ ಮಧ್ಯಾಹ್ನ 3.50 ಸಮಯಕ್ಕೆ ಠಾಣಾಧಿಕಾರಿಗೆ ನೀಡಿರುತ್ತೇನೆ. ನಾನು ಠಾಣೆಗೆ ಹೋದ ನಿಖರವಾದ ಸಮಯ ನೆನಪಿರುವುದಿಲ್ಲ. ಪಂಚನಾಮೆಯನ್ನು ನಾನು ಠಾಣೆಯಲ್ಲಿ ಬರೆದಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

ತೆರೆದ ನ್ಯಾಯಾಲಯದಲ್ಲಿ ಈ ಮೇಲೆ ಸಾಕ್ಷಿ ಸ್ವತಃ ಹೇಳಿದ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ.

**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,**

**ತಿ.ನರಸೀಪುರ.**